**ವಿಶೇಷ ಚೇತನರ ಭಾನುವಾರ**

**ನವೆಂಬರ್ 27, 2022**

ಪ್ರಸ್ತಾಪ: ಕಾಣದಿರುವ ಅಂಗವೈಕಲ್ಯ: ಕಾಣದಿರುವ ಸಮುದಾಯದ ಸಾಮರ್ಥ್ಯವನ್ನು ಬೆಳಕಿಗೆ ತರುವುದು

**ಕಆನಿ**

- ಕಾಣದಿರುವ ಅಂಗವೈಕಲ್ಯದ ಬಗ್ಗೆ **ಕಲಿಯುವುದು** ಮತ್ತು ಅವುಗಳನ್ನು ಗುರುತಿಸುವುದು
- ನಮ್ಮ ಸಂಪೂರ್ಣ ಸಾಮರ್ಥ್ಯವನ್ನು ಮುಟ್ಟಲು ಅವಶ್ಯವಿರುವ ಸಹಾಯ ಮಾಡಲು **ಆರಂಭಿಸುವುದು**
- ಅಂಗವೈಕಲ್ಯದ ಆಧಾರದ ಮೇಲೆ ಜನರನ್ನು ನಿಂದಿಸುವುದನ್ನು **ನಿಲ್ಲಿಸುವುದು**

---

**ವಿಶೇಷ ಚೇತನರ ಭಾನುವಾರದ ಆರಾಧನಾ ಕ್ರಮ**

**ಸತ್ಯವೇದ ಭಾಗ**

ಯೋಬ 17:1-16 ಲೂಕ 8:43-48

2 ಕೊರಿಂಥ 12:1-10 ಕೀರ್ತನೆ 139:7-15

**ಪ್ರಸ್ತಾಪ**

ಕಾಣದಿರುವ ಅಂಗವೈಕಲ್ಯ: ಕಾಣದಿರುವ ಸಮುದಾಯದ ಸಾಮರ್ಥ್ಯವನ್ನು ಬೆಳಕಿಗೆ ತರುವುದು

**ಪರಾರ್ಥ ಪ್ರಾರ್ಥನೆ**

ಕನಿಕರವುಳ್ಳ ದೇವರೇ ಮತ್ತು ಎಲ್ಲರ ಪೋಷಕನೆ,

ಈ ವಿಶೇಷ ಚೇತನ ಭಾನುವಾರದಂದು, ಎಲ್ಲಾ ರೀತಿಯ ಅಂಗವೈಕಲ್ಯತೆಯಿಂದ ಜೀವಿಸುತ್ತಿರುವ ಎಲ್ಲರನ್ನೂ ಅದರಲ್ಲೂ ವಿಶೇಷವಾಗಿ ನಮ್ಮ ಕಣ್ಣಿಗೆ ಮರೆಯಾಗಿರುವ ಅಂಗವೈಕಲ್ಯ ಜನರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಅಂತವರ ಇರುವಿಕೆಯನ್ನು ಗಮನಿಸಿ ನಾವು  ನಮ್ಮ ಸಮುದಾಯದ ಪ್ರತಿಯೊಬ್ಬರಿಗಾಗಿ ನಿನಗೆ ವಂದನೆ ಸಲ್ಲಿಸುತ್ತೇವೆ ಏಕೆಂದರೆ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ವಿಶೇಷವುಳ್ಳವರಾಗಿದ್ದಾರೆ.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಪ್ರೀತಿಯುಳ್ಳ ದೇವರೇ, ಕಾಣುವ ಮತ್ತು ಕಾಣದಿರುವ ಅಂಗವೈಕಲ್ಯ ಜನರ ಅಗತ್ಯತೆಗಳನ್ನು ಗ್ರಹಿಸಲು ನಮಗೆ ಸಹಾಯ ಮಾಡೆಂದು ಪ್ರಾರ್ಥಿಸುತ್ತೇವೆ. ಸ್ನೇಹದ ಬಾಂಧವ್ಯದಲ್ಲಿ ಸಾಮರ್ಥ್ಯವುಳ್ಳವರೊಂದಿಗೆ ಜೊತೆಯಾಗಿ ಹೋಗಲು ನಮಗೆ ಸಹಾಯ ಮಾಡು.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಮಾನಸಿಕ ಆರೋಗ್ಯದ ಸಮಸ್ಯೆಗಳಾದ ADHD, ಖಿನ್ನತೆ, ಆತಂಕ, PTSD, ಮನೋವ್ಯಾಧಿ, ಭಯ, ಇನ್ನು ಮುಂತಾದವುಗಳಿಗೆ ಒಳಗಾಗಿರುವ ಜನರಿಗಾಗಿ ಪ್ರಾರ್ಥಿಸುತ್ತೇವೆ. ಕರ್ತನೇ, ಅವರ ಬಲಹೀನತೆಯ ಸಮಯದಲ್ಲಿ ಅವರನ್ನು ಬಲಗೊಳಿಸು, ಮತ್ತು ನಿನ್ನ ಪ್ರೀತಿಯ ಪೋಷಣೆಯಲ್ಲಿ ಅವರಿಗೆ ಆತ್ಮವಿಶ್ವಾಸ ಕೊಡು. ನಾವೆಲ್ಲರೂ ಎಲ್ಲದನ್ನೂ ಹೆಚ್ಚಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡು.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಫೈಬ್ರೋಮ್ಯಾಲ್ಜಿಯ, ಸಂಧಿವಾತ, ಮೂಳೆನೋವು, ದೈಹೀಕ ಘಾಯ ಇನ್ನು ಮುಂತಾದವುಗಳಿಂದ ದೀರ್ಘಕಾಲದ ನೋವುಗಳಿಂದ ಬಳಲುತ್ತಿರುವ ಜನರಿಗಾಗಿ ಪ್ರಾರ್ಥಿಸುತ್ತೇವೆ. ಕರ್ತನೇ, ಅವರ ನೋವು ಆತಂಕವನ್ನು ದೂರಗೊಳಿಸು ಮತ್ತು ನಿನ್ನ ಅಪರಿಮಿತ ಕೃಪೆ ಅವರ ಮೇಲಿರಲಿ.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಪ್ರಪಂಚವನ್ನು ವಿಭಿನ್ನವಾಗಿ ನೋಡಿ ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಹಾಗು ಡಿಸ್ಲೆಕ್ಸಿಯ ರೀತಿಯಲ್ಲಿ ಬರೆಯಲು, ಓದಲು ಹಾಗು ಕಲಿಯಲು ಅಸಾಧಾರಣ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರಿಗಾಗಿ ಪ್ರಾರ್ಥಿಸುತ್ತೆವೆ. ನಾವು ಅವರ ವಿಭಿನ್ನ ತಲಾಂತುಗಳನ್ನು ಆಚರಿಸಲು ಹಾಗು ಅವರನ್ನು ಪ್ರೋತ್ಸಾಹಗೊಳಿಸಲು ನಮಗೆ ಸಹಾಯ ಮಾಡು.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಸ್ವಯಂ ನಿರೋಧಕ ಪರಿಸ್ಥಿತಿಗಳಾದ ಕರುಳಿನ ಖಾಯಿಲೆ, ಲೈಮ್ ರೋಗ (ಉಣ್ಣೆ), ಚರ್ಮ ಕ್ಷಯರೋಗ, ಬಹು ಅಂಗಾಂಶ ಗಟ್ಟಿಯಾಗುವ ರೋಗ, ಹೀಗೆ ಮುಂತಾದ ರೋಗಗಳಿಗೆ ತುತ್ತಾಗಿರುವ ಜನರಿಗಾಗಿ ಪ್ರಾರ್ಥಿಸುತ್ತೇವೆ. ಭಯ ಮತ್ತು ಆತಂಕವನ್ನು ಹೋಗಲಾಡಿಸಿ, ನಿರೀಕ್ಷೆಯನ್ನು ಹುಟ್ಟಿಸು ಹಾಗು ನಿನ್ನ ಪ್ರೀತಿ ಅವರ ದೇಹಕ್ಕೆ ಮತ್ತು ಆತ್ಮಕ್ಕೆ ಸಾಂತ್ವನ ಹಾಗು ಶಕ್ತಿಯನ್ನು ನೀಡಲಿ.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಮಧುಮೇಹ ಖಾಯಿಲೆ, ಹೃದಯ ಖಾಯಿಲೆ, ಕಿಡ್ನಿ ಖಾಯಿಲೆ, ಅತೀ ರಕ್ತದ ಒತ್ತಡ, ವಯೋಮಾನ ಖಾಯಿಲೆ/ಬಲಹೀನತೆ ಇನ್ನು ಮುಂತಾದ ರೋಗಗಳಿಂದ ಬಳಲುತ್ತಿರುವ ಜನರಿಗಾಗಿ ಪ್ರಾರ್ಥಿಸುತ್ತೇವೆ. ಪ್ರತಿಯೊಬ್ಬರೂ ಕೂಡ ಈ ಖಾಯಿಲೆಯೊಂದಿಗೆ ಜೀವಿಸಲು ಸಹಾಯ ಮಾಡು.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಪರಲೋಕದ ದೇವರೇ, ನಾವು ಕಾಣದಿರುವ ಅಂಗವೈಕಲ್ಯದ ಜನರ ಬಗ್ಗೆ ಹೆಚ್ಚಾಗಿ ಆಲೋಚಿಸದೆ, ಅವರ ಕಡೆಗೆ ಗಮನಹರಿಸದೆ, ಅವರಿಗಾಗಿ ಪ್ರಾರ್ಥಿಸದೆ ನಾವು ನಿಷ್ಕಾಳಜಿ ಮಾಡಿದ್ದೇವೆಂದು ಒಪ್ಪಿಕೊಳ್ಳುತ್ತೇವೆ. ನಾವು ಅಂತದನ್ನು ಗುರುತಿಸಿ ಅಂತವರಿಗೆ ಅವಶ್ಯವಿರುವ ಸಹಾಯ ಮಾಡಲು ನಮಗೆ ಅನುಕೂಲಿಸಿ ಕೊಡೆಂದು ಪ್ರಾರ್ಥಿಸುತ್ತೇವೆ. ನಮಗೆ ಸರಿಯಾದ ವರ್ತನೆ, ಇಚ್ಚಾಶಕ್ತಿ ಕೊಡುವುದರ ಮೂಲಕ ಮಾನವ ಘನತೆಗೆ ಹಾಗು ನಿನ್ನ ಮಹಿಮೆಗೆ ಅಡ್ಡಿಪಡಿಸುವ ಎಲ್ಲಾ ತೊಂದರೆಗಳನ್ನು ತೆಗೆದುಹಾಕುವಂತೆ ನಮ್ಮನ್ನು ಉಪಯೋಗಿಸು.

**ಕೃಪೆಯುಳ್ಳ ದೇವರೇ ನಮ್ಮ ಪ್ರಾರ್ಥನೆ ಕೇಳು**

ಕರ್ತನೇ, ನಮ್ಮ ಸಮುದಾಯದ ವೈವಿಧ್ಯತೆಗಾಗಿ ಹಾಗು ಪ್ರತಿಯೊಬ್ಬರ ವಿಶೇಷತೆಗಾಗಿ ನಿನಗೆ ಸ್ತೋತ್ರ ಸಲ್ಲಿಸುತ್ತೇವೆ. ನಾವು ನಿನ್ನ ದೈವೀಕ ಇಚ್ಚೆಯಿಂದ ಆರಿಸಲ್ಪಟ್ಟಿದ್ದೇವೆ ಎಂದು ನಂಬುತ್ತೇವೆ. ಪ್ರತಿಯೊಬ್ಬರನ್ನೂ ಗೌರವಿಸಲು ನಮಗೆ ಸಹಾಯ ಮಾಡು ಹಾಗು ನಾವೆಲ್ಲರೂ ಕ್ರಿಸ್ತನ ದೇಹವಾಗಿ ಒಂದು ಸಭೆಯಾಗಿ ಬೆಳೆಯಲು ಸಹಾಯ ಮಾಡು.

ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ಹೆಸರಿನಲ್ಲಿ ಈ ಪ್ರಾರ್ಥನೆಯನ್ನು ಬೇಡಿದ್ದೇವೆ.ಆಮೆನ್

**ಅಂತ್ಯಾಶೀರ್ವಾದ**

ಕಾಣದಿರುವುದನ್ನು ರೂಪಾಂತರದಲ್ಲಿ ಕಾಣುವಂತೆ ಮಾಡಿದ ಸರ್ವಶಕ್ತ ದೇವರು ನಮ್ಮನ್ನು ಆಶೀರ್ವದಿಸಲಿ

ಮಗನ ದುರ್ಬಲತೆಯಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟ ಪ್ರೀತಿಯು ನಮ್ಮನ್ನು ಕಾಪಾಡಲಿ

ಆತ್ಮನೊಂದಿಗೆ ಯಾವಾಗಲೂ ಇರುವ ಬೆಳಕು ನಮ್ಮೆಲ್ಲರನ್ನೂ ಸಂರಕ್ಷಿಸಲಿ ಆಮೆನ್